ಓ ಎಸ್ ನಂಬರ 21/2015

ಪಿಡಬ್ಲ್ಯೂ-1

ಸಾಕ್ಷಿಗೆ ದಿಃ 21-10-2019 ರಂದು ಪ್ರಮಾಣ ವಚನ ಭೋದಿಸಲಾಯಿತು.

ಪಾಟೀ ಸವಾಲುಃ ಶ್ರೀ.ಎಸ್.ಎನ್.ಪಿ.ವಕೀಲರಿಂದ.

ನಾನು 9 ನೇ ತರಗತಿಯವರೆಗೆ ಓದಿದ್ದೆನೆ. ನನ್ನ ಅಜ್ಜನ ಹೆಸರು ಮಾರ್ತಾಂಡ ಅನ್ನುವುದು ನಿಜ. ಅವರಿಗೆ 5 ಜನ ಗಂಡು ಮಕ್ಕಳು ಮತ್ತು ಒಬ್ಬಳು ಮಗಳು ಅನ್ನುವುದು ನಿಜ. ನನ್ನ ಕಾಕಾ ಬಯರು ತೀರಿಕೊಂಡಿದ್ದಾರೆ ಅನ್ನುವುದು ನಿಜ. ಅವರಿಗೆ ಸಂಜು ಮತ್ತು ರಾಜು ಮಕ್ಕಳು ಅನ್ನುವುದು ನಿಜ. ನನ್ನ ತಂದೆಗೆ ನಾನು ಮತ್ತು 5 ರಿಂದ 8 ನೇ ಪ್ರತಿವಾದಿಯರು ಮಕ್ಕಳು ಅನ್ನುವುದು ನಿಜ. 1985-86 ರಲ್ಲಿ ನನ್ನ ತಂದೆ ಮತ್ತು ಅವರ ಸಹೋದರರು ಬೇರೆಯಾಗಿ ಇರುತ್ತಿದ್ದರು ಅನ್ನುವುದು ನಿಜ. ಅವರು ತಮ್ಮ ಕುಟುಂಬದ ಆಸ್ತಿಗಳನ್ನು ಪಾಲು ಮಾಡಿಕೊಂಡು ತಮ್ಮ ತಮ್ಮ ಪಾಲನ್ನು ಸಾಗುವಳಿ ಮಾಡುತ್ತಿದ್ದರು ಅನ್ನುವುದು ನಿಜ. ನನ್ನ ತಂದೆ ಮತ್ತು ನನ್ನ ಕಾಕಾ ಬಯರು ಇಬ್ಬರು ಸೇರಿ ಸರ್ವೆ ನಂ. 179 ರಲ್ಲಿ 2 ಎಕರೆ ಜಮೀನನ್ನು ತಮ್ಮ ಮನೆತನದ ಅಡಚಣೆ ಸಲುವಾಗಿ ಮಾರಿದ್ದಾರೆ ಅನ್ನುವುದು ನಿಜ. ಅದನ್ನು ಪ್ರಧಾನ ಮಾಯಪ್ಪ ತುಕಾನ ಮಾಳಿ ಇವರಿಗೆ ಮಾರಿದರು ಅನ್ನುವುದು ನಿಜ. ಆ ಪ್ರಕಾರ ಅವರ ಹೆಸರು ದಾಖಲಾಗಿ ಕಬ್ಜಾದಲ್ಲಿ ಇದ್ದರು ಅನ್ನುವುದು ನಿಜ. ಸದರಿ ಪ್ರಧಾನ ಮಾಯಪ್ಪ ತುಕಾನ ಮಾಳಿ ಇವರು ಸದರಿ 2 ಎಕರೆ ಜಮೀನನ್ನು 10 ನೇ ಪ್ರತಿವಾದಿಗೆ 15-09-2000 ರಂದು ಮಾರಿದರು ಅನ್ನುವುದು ನಿಜ. ಆ ಪ್ರಕಾರ 10 ನೇ ಪ್ರತಿವಾದಿ ಕಬ್ಜಾದಲ್ಲಿ ಇದ್ದಾರೆ ಅನ್ನುವುದು ನಿಜ. ಅವರು ಬೆಳೆ ಬೆಳೆಯುತ್ತಿದ್ದು ಸರ್ಕಾರಕ್ಕೆ ಕರ ಕೂಡಾ ತುಂಬುತ್ತಿದ್ದಾರೆ ಅನ್ನುವುದು ನಿಜ. ಆ ಖರೀದಿ ಪತ್ರ ನಮಗೆ ಮತ್ತು ನನ್ನ ಸಹೋದರ ಸಹೋದರಿಯರಿಗೆ ಬಂದನಕಾರಿ ಇದೆ ಅನ್ನುವುದು ನಿಜ

ಮರುಮುಖ್ಯವಿಚಾರಣೆ ಇರುವುದಿಲ್ಲ.

(ಸಾಕ್ಷಿ ಹೇಳಿಕೆಯಂತೆ ನನ್ನ ಉಕ್ತಲೇಖನದ ಮೇರೆಗೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು.)

ಓ.ಹೆ.ಕೆ.ಸರಿಯಿದೆ.

ಪ್ರಧಾನ ಹಿ.ದಿ..ನ್ಯಾಯಾಧೀಶರು

ಚಿಕ್ಕೋಡಿ